# ಮೈಸೂರು ವಿಶ್ವವಿದ್ಯಾನಿಲಯ

(ಸ್ಥಾಪನೆ-1916)
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್-2022 ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)


ಸಂಖ್ಯೆ: ಪ.ವಿ.8.1/ಪಿ.ಜಿ.ಸೆಮಿಸ್ಟರ್/ಪ್ರಕಟಣೆ/2009–10


ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು–570 005


ದಿನಾಂಕ: 18–04–2023

## ಅಧಿಸೂಚನೆ

ವಿಷಯ: ಮೇ–2023ರ ಮಾಹೆಯಲ್ಲಿ ನಡೆಯಲಿರುವ **ಒಂದನೇ ಸೆಮಿಸ್ಟರ್**ನ ಡಿಪ್ಲೋಮಾ/ಸರ್ಟಿಫಿಕೇಟ್ ಪ್ರೋಗ್ರಾಂಗಳ (ಕೋರ್ಸ್) ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡುವ ಮತ್ತು ಅಭ್ಯರ್ಥನ ಪತ್ರ ಸಲ್ಲಿಸುವ ಬಗೆಗೆ.

ಉಲ್ಲೇಖ: ವಿ.ವಿ. ಪರಿಷ್ಕೃತ ಅಧಿಸೂಚನೆ ಸಂಖ್ಯೆ: ಎ.ಸಿ.7(ಎ)/456/2016–17, ದಿನಾಂಕ: 11–01–2023.

*******

ಮೇ–2023ರ ಮಾಹೆಯಲ್ಲಿ ನಡೆಯಲಿರುವ **ಒಂದನೇ ಸೆಮಿಸ್ಟರ್** ಡಿಪ್ಲೋಮಾ/ಸರ್ಟಿಫಿಕೇಟ್ ಪ್ರೋಗ್ರಾಂಗಳ (ಕೋರ್ಸ್‌ಗಳ) ಪರೀಕ್ಷೆಯ ಸಂಬಂಧದ, ವೇಳಾಪಟ್ಟಿ ಹಾಗೂ ಪರೀಕ್ಷಾ ಶುಲ್ಕ ಮಾಹಿತಿಗಳು ಕೆಳಕಂಡಂತಿರುತ್ತವೆ.

| | | |
|---|---|---|
| 1 | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ (ಪ್ರತ್ಯೇಕ ಶೈಕ್ಷಣಿಕ ವೇಳಾಪಟ್ಟಿಗಳಿಗೆ ಇರುವ ಪ್ರೋಗ್ರಾಂ (ಕೋರ್ಸ್‌ಗಳ) ಪರೀಕ್ಷೆಗಳು ಆಯಾ ಶೈಕ್ಷಣಿಕ ವೇಳಾಪಟ್ಟಿಯನುಸಾರ ಪ್ರಾರಂಭವಾಗುವುದು) | 16–05–2023 |
| 2 | ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಪರೀಕ್ಷಾ ಅರ್ಜಿ ಪತ್ರವನ್ನು ಸಲ್ಲಿಸಲು ಅಂತಿಮ ದಿನಾಂಕ | 29–04–2023 |
| 3 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡಲು ಅಂತಿಮ ದಿನಾಂಕ | 02–05–2023 |
| 4 | ವೇಳಾಪಟ್ಟಿ ಮತ್ತು ಪ್ರಶ್ನೆಪತ್ರಿಕೆ ಬೇಡಿಕೆಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | 02–05–2023 |
| 5 | ಪ್ರವೇಶ ಪತ್ರಗಳು, ಅಭ್ಯರ್ಥನ ಪಟ್ಟಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅಂತಿಮ ದಿನಾಂಕ | 10–05–2023 |

## ಪರೀಕ್ಷಾ ಶುಲ್ಕಗಳ ವಿವರಗಳು

**1. All P.G. Diploma/Diploma/Certificate Courses:**

| | |
|---|---|
| Whole Exam (Per exam) | ₹1,440=00 |
| Per Paper with Practical | ₹ 847=00 |
| Per Paper without Practical | ₹ 506=00 |
| **Marks Card Fee (Per Year/Semester)** | **₹ 352=00** |

ವಿ.ವಿ.ಆದೇಶ ಸಂಖ್ಯೆ:ಎಸಿ.2(ಎಸ್)/122/04–05, ದಿನಾಂಕ: 04–02–2005ರ ಪ್ರಕಾರ ಎಲ್ಲಾ ಪದವಿ ಪ್ರೋಗ್ರಾಂಗಳಿಗೆ (ಕೋರ್ಸ್‌ಗಳಿಗೆ) ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಪತ್ರಿಕೆಗಳ ಪರೀಕ್ಷೆ ತೆಗೆದುಕೊಂಡಲ್ಲಿ ಪಾವತಿಸಬೇಕಾದ ಗರಿಷ್ಠ ಪರೀಕ್ಷಾ ಶುಲ್ಕವು ಆಯಾಯ ವರ್ಷಕ್ಕೆ ವಿಷಯವಾರು ನಿಗದಿಗೊಳಿಸಲಾಗಿರುವ ಪೂರ್ಣ ಪರೀಕ್ಷಾ ಶುಲ್ಕಕ್ಕೆ (whole examination fee) ಸಮಾನವಾಗಿರುತ್ತದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸೂಚನೆಗಳು:

1. ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇಲ್ಲಿ ವಿಶ್ವವಿದ್ಯಾನಿಲಯ ಪರೀಕ್ಷಾ ಖಾತೆಗೆ ಜಮಾ ಆಗುವಂತೆ ಪಾವತಿಸಬೇಕು.
2. ಲಿಖಿತ ಪರೀಕ್ಷೆಗಳನ್ನು **16-05-2023** ರಿಂದ ಪ್ರಾರಂಭಿಸಿ 15 ದಿವಸದೊಳಗೆ ಮುಗಿಯುವಂತೆ ಬೆಳಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಇರುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ 05 ಪ್ರತಿಗಳನ್ನು ಅನುಮೋದನೆಗೆ ಕಳುಹಿಸುವುದು. ವೇಳಾಪಟ್ಟಿಯಲ್ಲಿ ಸರಿಯಾದ **Question Paper Code** ಮತ್ತು **Title** ಅನ್ನು ನಮೂದಿಸುವುದು.
3. ಪ್ರಾಯೋಗಿಕ, ಮೌಖಿಕ ಪರೀಕ್ಷೆಗಳ ವೇಳಾಪಟ್ಟಿಗಳನ್ನು (ಲಿಖಿತ ಪರೀಕ್ಷೆಗಳ ನಂತರ ಇರುವಂತೆ ಸಿದ್ಧಪಡಿಸಿ) ಪರೀಕ್ಷಾ ಮಂಡಳಿ ಅಧ್ಯಕ್ಷರೊಡನೆ ಸಮಾಲೋಚಿಸಿ ಅನುಮೋದನೆಗೆ ಕಳುಹಿಸುವುದು.
4. ಸುತ್ತೋಲೆ ಸಂಖ್ಯೆ: ವಿಫ/1/9/2013-14, ದಿನಾಂಕ: 25-09-2013 ಪ್ರಕಾರ 2013-14ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ/ಡಿಪ್ಲೋಮ/ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮತೆಗೆದುಕೊಳ್ಳುವುದು.
5. ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ವಿದ್ಯಾರ್ಥಿಗಳು ಅವರ ಪೋಷಕರ ಆದಾಯ ರೂ.2.5 ಲಕ್ಷಗಳು ಮೀರಿದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.
6. ಪ್ರವರ್ಗ-೧ ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೆ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ಅಭ್ಯರ್ಥಿಗಳಿಗೆ ಅವರ ಪೋಷಕರ ವಾರ್ಷಿಕ ವರಮಾನದ ಆಧಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರೂ ಅಂತ ಅಭ್ಯರ್ಥಿಗಳು ನಿಗದಿ ಪಡಿಸಿರುವ ಅಂಕಪಟ್ಟಿ ಶುಲ್ಕ **ರೂ.352/-** ಪಾವತಿಸಬೇಕು.
7. ಕುಲಸಚಿವರ ಪತ್ರಸಂಖ್ಯೆ ಎ.ಸಿ.2/182/92-93, ದಿನಾಂಕ: 02-03-2000ರಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗ ಹಾಗೂ ಕ್ಯಾಟಗರಿ-1ರ ವರ್ಗದ ವಿದ್ಯಾರ್ಥಿಗಳು ಸದರಿ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ.
8. ಒಮ್ಮೆ ಪಾವತಿ ಮಾಡಿದ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೇ ಆಗಲಿ ಮರುಪಾವತಿ ಮಾಡಲಾಗುವುದಿಲ್ಲ ಅಥವಾ ಮುಂದಿನ ಪರೀಕ್ಷೆಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.
9. ಪರೀಕ್ಷೆಯ ಒಂದು ಭಾಗವಾಗಿರುವ ಮಹಾನಿಬಂಧ/ಪ್ರೌಢ ಪ್ರಬಂಧ/ಪ್ರಾಜೆಕ್ಟ್ ಕಾರ್ಯ/ಕ್ಷೇತ್ರಕಾರ್ಯ ವರದಿ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯದಲ್ಲಿನ ಲಿಖಿತ/ಪ್ರಾಯೋಗಿಕ ಪರೀಕ್ಷೆಯ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಧ್ಯಯನ ವಿಭಾಗಗಳ ಸಂಬಂಧಪಟ್ಟ ಅಧ್ಯಕ್ಷರು/ಮುಖ್ಯಸ್ಥರಿಗೆ ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು. ಪ್ರೌಢಪ್ರಬಂಧದಲ್ಲಿ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.
10. ವಿಶೇಷ ಸಂದರ್ಭಗಳಲ್ಲಿ ಒಪ್ಪುವಂತಹ ಕಾರಣವಿದ್ದರೆ ಮೇಲ್ಕಂಡ ಪ್ರಸಂಗಗಳಲ್ಲಿ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳ ಕೊನೆಯ ದಿನಾಂಕದಿಂದ ಗರಿಷ್ಠ ಒಂದು ತಿಂಗಳ ಕಾಲಾವಧಿ ವಿಸ್ತರಿಸಲು ಅವಕಾಶ ನೀಡಲಾಗುವುದು. ಅಂತಹ ಅಭ್ಯರ್ಥನ ಪತ್ರಗಳನ್ನು ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರು/ಮುಖ್ಯಸ್ಥರು ಪರಿಗಣಿಸಬೇಕೇ ಬೇಡವೇ ಎಂಬ ಶಿಫಾರಸ್ಸಿನೊಂದಿಗೆ ಕಳುಹಿಸಿ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯಬೇಕು.

ಆದರೆ, ಗೊತ್ತುಪಡಿಸಿದ ವಿಸ್ತರಿತ ಕಾಲಾವಧಿಯ ನಂತರವೂ ಅಭ್ಯರ್ಥಿಗಳು ತಮ್ಮ ಮಹಾನಿಬಂಧ/ಪ್ರೌಢ ಪ್ರಬಂಧ ಇತ್ಯಾದಿಗಳನ್ನು ಸಲ್ಲಿಸದಿದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಪರೀಕ್ಷೆಯ ಆ ಭಾಗದಲ್ಲಿ ಗೈರುಹಾಜರೆಂದು ಪರಿಗಣಿಸಿ ಫಲಿತಾಂಶಗಳನ್ನು ಪ್ರಕಟಿಸಲಾಗುವುದು. ಇವುಗಳನ್ನು ಪಾಲಿಸದಿದಲ್ಲಿ ಮುಂದೆ ಉಂಟಾಗುವ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಭಾಗಗಳ/ಕಾಲೇಜುಗಳ ಮುಖ್ಯಸ್ಥರೆ ಹೊಣೆಯಾಗುತ್ತಾರೆ.

"$C_1$ ಮತ್ತು $C_2$ ಅಂಕಗಳಲ್ಲಿ ಒಟ್ಟಾರೆಯಾಗಿ 30% ಅಂಕಗಳನ್ನು ಗಳಿಸದೇ ಇದ್ದಲ್ಲಿ ಅಂತಹವರು $C_3$ ಪರೀಕ್ಷೆಯನ್ನು ಬರೆಯಲು ಅರ್ಹರಲ್ಲ".

ವಿಶೇಷ ಸೂಚನೆ:

1. ಪಠ್ಯಕ್ರಮದಲ್ಲಿ ಅಥವಾ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ರೀತಿಯ ಬದಲಾವಣೆಯಿದ್ದಲ್ಲಿ ಸದರಿ ವಿಭಾಗದ ಅಧ್ಯಕ್ಷರು ಬದಲಾವಣೆಯ ವಿವರಗಳೊಂದಿಗೆ ಕಂಪ್ಯೂಟರ್ ವಿಭಾಗದ ಮುಖ್ಯಸ್ಥರನ್ನು ಭೇಟಿಯಾಗಬೇಕೆಂದು ಕೋರಲಾಗಿದೆ.
2. ಪರೀಕ್ಷೆಗಳಿಗೆ **Bar Coded/OMR** ಉತ್ತರ ಪತ್ರಿಕೆಗಳನ್ನು ಉಪಯೋಗಿಸಬೇಕು. ಇದಕ್ಕೆ ಪೂರಕವಾಗಿ ಪ್ರತಿ ವಿದ್ಯಾರ್ಥಿಗೆ **Student ID** ಯನ್ನು ಹಾಗೂ ಪ್ರತಿ ಪ್ರಶ್ನೆ ಪತ್ರಿಕೆಗೆ **Question Paper Code** ಅನ್ನು ನೀಡಲಾಗಿದೆ. **Student ID** ಮತ್ತು **Question Paper Code**ಗಳ ಮಾಹಿತಿ ಬೇಕಾದಲ್ಲಿ ಪರೀಕ್ಷಾ ವಿಭಾಗದ ಗಣಕ ಕೇಂದ್ರದಿಂದ ಪಡೆಯಬೇಕು.
3. ಅಗತ್ಯವಿರುವಷ್ಟು ಪರೀಕ್ಷಾ ಅರ್ಜಿಯ ಖಾಲಿ ಫಾರಂಗಳನ್ನು ಗಣಕ ಕೇಂದ್ರದಿಂದ (ಪರೀಕ್ಷಾ ಭವನ) ಮುಂಚಿತವಾಗಿ ಪಡೆಯಬೇಕು.
4. ಚಾಯ್ಸ್ ಬೇಸ್ಡ್ ಕ್ರೆಡಿಟ್ ಪದ್ಧತಿಗೆ ಸಂಬಂಧಿಸಿದಂತೆ **Continuous Assessment** ಬಗ್ಗೆ ವಿವರಗಳನ್ನು ರೆಗ್ಯುಲೇಷನ್ ನಂ.6.2.2.1 ರಲ್ಲಿ ಈ ಕೆಳಕಂಡಂತೆ ವಿವರಿಸಲಾಗಿದೆ:

ಈ ಬಗ್ಗೆ ಡಿಪಾರ್ಟ್‌ಮೆಂಟ್ ಕೌನ್ಸಿಲ್ ತೆಗೆದುಕೊಂಡ ನಿರ್ಣಯದ ಪ್ರತಿಯನ್ನು ಈ ಕೂಡಲೇ ಮುಂದಿನ ಕ್ರಮಕ್ಕಾಗಿ ಪರೀಕ್ಷಾ ವಿಭಾಗಕ್ಕೆ ಕಳುಹಿತಕ್ಕದ್ದು.

20.4.2023

ಕುಲಸಚಿವ (ಪರೀಕ್ಷಾಂಗ)

ಇವರಿಗೆ:

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ/ಸಂಸ್ಥೆಗಳ ಅಧ್ಯಕ್ಷರು/ನಿರ್ದೇಶಕರು, ಮಾಗಂ, ಮೈಸೂರು.
2. ನಿರ್ದೇಶಕರು/ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ಹಾಸನ.

} ಅವಗಾಹನೆ ಮತ್ತು ಸೂಕ್ತ ಕ್ರಮಕ್ಕಾಗಿ

3. ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ.
4. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು.
7. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ವ್ಯವಸ್ಥಾಪಕರು, ಮೆಟಾ–ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಎಲ್ಲಾ ಉಪ/ಸಹಾಯಕ ಕುಲಸಚಿವರು (ಪರೀಕ್ಷಾಂಗ), ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಕಾರ್ಯನಿರ್ವಾಹಕರು, ಪ.ವಿ.8.2/8.3/8.5/8.7/8.9/1.7/ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– ಸೂಕ್ತ ಕ್ರಮಕ್ಕಾಗಿ.
13. ಕಛೇರಿ ಪ್ರತಿ.